6. ಗಮನ ಸೆಳೆಯುವ ಸೂಚನೆಗಳು

1. ವಿಷಯ: ಕಾವೇರಿ ಬೇಸಿನ್‌ನಲ್ಲಿ ಅನುದಾನ ಕೊಡದೆ. ಕಾಮಗಾರಿಗಳ ಕೆಲಸ ಆಗದಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ: ಕಾವೇರಿ ಬೇಸಿನ್‌ನಲ್ಲಿ ಇವತ್ತು ಹೆಚ್ಚಿನ ಅನುದಾನ ಕೊಡದೇ ಕಾಮಗಾರಿಗಳ ಕೆಲಸ ಆಗಿದಿರುವ ಬಗ್ಗೆ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಮಂತ್ರಿಗಳು ಇಲ್ಲ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮೊದಲನೆಯದಾಗಿ ಈಗಾಗಲೇ 7–15 ಆಯಿತು.

ಶ್ರೀ ಹೆಚ್.ಡಿ. ರೇವಣ್ಣ: ಕಳೆದ ಸಾರಿಯೂ ಆಗಿಲ್ಲ.

ಅಧ್ಯಕ್ಷರು: ಎರಡು ದಿವಸಗಳಿಂದ ಪೆಂಡಿಂಗ್ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಸ್ವಲ್ಪ ಕೇಳಿ, ನಿಮಗೆ ಸುಮ್ಮನೆ ಎಂಥದೋ ಒಂದು ಉತ್ತರ ಬೇಕೋ?

ಶ್ರೀ ಹೆಚ್.ಡಿ. ರೇವಣ್ಣ: ನಿಮ್ಮದು ಒಪ್ಪಿಕೊಂಡಾಯಿತಲ್ಲ ಬಿಡಿ. ನಾವು ನಿಮ್ಮನ್ನು ಏನಾದರೂ ಪ್ರಶ್ನೆ ಮಾಡುತ್ತಿದ್ದೇವೆಯೇ? ನಾವು ಗ್ರಾಮೀಣಾಭಿವೃದ್ಧಿ ಸಚಿವರನ್ನು ಪ್ರಶ್ನೆ ಮಾಡುತ್ತಿಲ್ಲ. ಕಾವೇರಿ ಬೇಸಿನ್ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾ ಮರಣಶಾಸನ ಎಂದು ಹೇಳಿದರು. ದುಡ್ಡು ಕೊಡಬೇಕೆಂದು ಕೇಳುತ್ತಿದ್ದೇವೆ.

ಶ್ರೀಕೆ.ಎಸ್. ಈಶ್ವರಪ್ಪ: ಈಗ adjourn ಮಾಡಿ ನಾಳೆ ಉತ್ತರ ಕೊಡಿಸುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ: ನೀರಾವರಿ ಮಂತ್ರಿಗಳು, ಹಣಕಾಸಿನ ಮಂತ್ರಿಗಳು, ಮುಖ್ಯಮಂತ್ರಿಗಳಿಗೆ ನಮಗೆ ಹೆಚ್ಚಿಗೆ ದುಡ್ಡು ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು: ಎರಡು ದಿವಸದ್ದೂ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮೊದಲನೆಯದು ಈಗಾಗಲೇ 7–15 ಆಯಿತು, ಎರಡನೆಯದಾಗಿ ಈಗ ಅವರ್ಯಾರು ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಈಗ ತೋಟಗಾರಿಕೆ ಮಂತ್ರಿಗಳು ಇದ್ದಾರೆ. ಎರಡನೆಯದು ಗಮನ ಸೆಳೆಯಬೇಕಾಗಿದೆ. ನಾನು ಈಗ ಆರು ತಿಂಗಳಿನಿಂದ ಕೇಳುತ್ತಿದ್ದೇನೆ. ಕಳೆದ ನಾಲ್ಕು ವರ್ಷಗಳಿಂದ ಈ ಆಲೂಗಡ್ಡೆ ಬೆಳೆಗಾರರಿಗೆ 5 ಸಾವಿರ ಕೊಟ್ಟಿರುವುದರ ಬಗ್ಗೆ ಕೇಳಬೇಕಾಗಿದೆ, ಅದು ಯಾವುದಕ್ಕೋ ಮೆಡಿಸಿನ್‌ಗೆ ಕೊಟ್ಟುಬಿಟ್ಟು ಮಧ್ಯವರ್ತಿಗಳು ಹೊಡೆದುಕೊಳ್ಳುವ ಹಾಗೆ ಆಗಿದೆ. ಈಗ ಮುಖ್ಯಮಂತ್ರಿಗಳು ಇಲ್ಲದೇ ಹೋದರೆ ಅವರ ಪರವಾಗಿ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೋ ಯಾರು ಉತ್ತರ ಕೊಡುತ್ತಾರೆ? ದಯಮಾಡಿ ಕೇಳಿ ಸರ್.

ಅಧ್ಯಕ್ಷರು: ಕೃಷಿ ಸಚಿವರು ಈಗ ಇದ್ದರಲ್ಲ?

ಶ್ರೀ ಹೆಚ್.ಡಿ. ರೇವಣ್ಣ: ತೋಟಗಾರಿಕೆ ಮಂತ್ರಿಗಳು ಇಲ್ಲಿಯೇ ಇದ್ದಾರೆ.

ಅಧ್ಯಕ್ಷರು: ಅವರಿಗೆ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಎರಡನೆಯ ವಿಚಾರ ತೋಟಗಾರಿಕೆ ಮಂತ್ರಿಗಳಿಗೆ ಬರುತ್ತದೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ತೆಗೆದುಕೊಂಡಾಯಿತು. ಇದ್ದವರು ಹೋರಟು ಹೋಗುತ್ತಾರಲ್ಲ? ಮುಖ್ಯ ಸಚೇತಕರೆ ನೀವು, ನಿಮ್ಮದು ಗಮನ ಸೆಳೆಯುವ ಸೂಚನೆ ಇದೆ ಎಂದು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಬೇಕು.

ಶ್ರೀ ಸಿದ್ದು ಸವದಿ: ನಾನು ಹೇಳಿದ್ದೇನೆ.

ಅಧ್ಯಕ್ಷರು: ಹೇಳಿದ್ದರೂ ಹೋಗಿದ್ದಾರಲ್ಲಾ?

ಶ್ರೀ ಹೆಚ್.ಡಿ. ರೇವಣ್ಣ : ನಾವು ದಿನ ಕಾದುಕೊಂಡು ಕುಳಿತಿದ್ದೇವೆ, ಹೀಗಾದರೆ ಹೇಗೆ? ಕಾವೇರಿ ಬೇಸಿನ್‌ನವರು ಕಾದುಕೊಂಡು ಕುಳಿತ್ತಿದ್ದೇವೆ.

ಅಧ್ಯಕ್ಷರು: ಕೃಷಿ ಸಚಿವರು ಇಲ್ಲ. ಎರಡೂ ದಿವಸದ್ದು ಉಳಿದುಕೊಂಡಿದೆ.

ಶ್ರೀ ಹೆಚ್.ಡಿ. ರೇವಣ್ಣ: ಈಗ ಏನು ಮಾಡುವುದು ಸರ್?

ಅಧ್ಯಕ್ಷರು : ನಾಳೆಗೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ: ಇಲ್ಲಿಯೇ ತೋಟಗಾರಿಕೆ ಮಂತ್ರಿಗಳು ಇದ್ದಾರೆ. ಅವರಿಂದ ಎರಡನೆಯದಕ್ಕೆ ಉತ್ತರ ಕೊಡಿಸಿ.

ಅಧ್ಯಕ್ಷರು: ಇದು ನಿಮ್ಮದೆ ನೀವು ಉತ್ತರ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ: ತೋಟಗಾರಿಕೆ ಸಚಿವರು ಇಲ್ಲಿಯೇ ಇದ್ದಾರೆ, 5 ಸಾವಿರ ರೂಪಾಯಿ ನೇರವಾಗಿ ಕೊಡುವುದರ ಬಗ್ಗೆ ಹೇಳಿ.

ಅಧ್ಯಕ್ಷರು: ಅದು ತೋಟಗಾರಿಕೆ ಅಲ್ಲ. ಅದು ಕೃಷಿ ಸಚಿವರಿಗೆ ಸಂಬಂಧಪಟ್ಟಿದ್ದು.

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲಾ ಸರ್. ಆಲೂಗಡ್ಡೆ ಅದು ತೋಟಗಾರಿಕೆ ಸಚಿವರಿಗೆ ಸಂಬಂಧಪಟ್ಟಿದ್ದು.

ಶ್ರೀ ಹೆಚ್.ಡಿ.ರೇವಣ್ಣ: ಇದು ತೋಟಗಾರಿಕೆ ಸಚಿವರಿಗೆ ಬರುತ್ತದೆ.

ಅದ್ಯಕ್ಷರು: ಅವರಿಗೆ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಅದು ತೋಟಗಾರಿಕೆ ಸಚಿವರಿಗೆ ಬರುವುದು. ಮಾನ್ಯ ಸಚಿವರು ಉತ್ತರ ಹೇಳಿ. ನಾಲ್ಕೈದು ವರ್ಷಗಳಿಂದ ಇದು ಲಾಸ್ ಆಗಿರುವುದು. ಇದು ಏನೆಂದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ತೋಟಗಾರಿಕೆ ಮಂತ್ರಿಗಳು, ನೀವು ಉತ್ತರ ಕೊಡುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ: ತೋಟಗಾರಿಕೆ ಮಂತ್ರಿಗಳು ಕೊಟ್ಟಿರುವ ಉತ್ತರದ ಪ್ರತಿಯಾದರೂ ಕೊಡಿ. ನಾವು ಓದಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ: ಗಮನ ಸೆಳೆಯುವ ಸೂಚನೆಗಳು ನಿನ್ನೆ ಮತ್ತು ಈ ದಿವಸ ಬಂದಿವೆ ಆದರೂ ಉತ್ತರ ಬಂದಿಲ್ಲವೆಂದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ: ನಾನು ಸುಮಾರು 6 ತಿಂಗಳುಗಳಿಂದ ಕಾಯುತ್ತಿದ್ದೇನೆ.

ಅಧ್ಯಕ್ಷರು: ಉತ್ತರ ಕೊಡಿ. ಈಗ ಆಲೂಗಡ್ಡೆ ಬೆಳೆಗಾರರ ಬಗ್ಗೆ ಗಮನ ಸೆಳೆದಿದ್ದಾರೆ.

ಶ್ರೀ ಸಿದ್ದರಾಮಯ್ಯ: ಹೇಳಿಕೆ ಮಾಡಿಸಿ, ಉತ್ತರ ಕೊಡಿಸಿ.

ಅಧ್ಯಕ್ಷರು: ಉತ್ತರ ಕೊಟ್ಟಿದ್ದಾರೆ. ನೀವು ನೋಡುವುದಿಲ್ಲ. ಏನೂ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಕಾಪಿ ಕೊಡಿ.

ಶ್ರೀ ಸಿದ್ದರಾಮಯ್ಯ: ರವೀಂದ್ರನಾಥ್‌ರವರೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ನೋಡುವುದೇ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮಂತ್ರಿಗಳು ಅದು ಏನೆಂದು ಓದಿ ನಾವು ಸ್ವಲ್ಪ ತಿಳಿದುಕೊಳ್ಳಿ.

ಅಧ್ಯಕ್ಷರು: ಉತ್ತರ ಇದೆ ನೀವು ಹೇಳಿ.

2. ವಿಷಯ: ಆಲೂಗಡ್ಡೆ ಬೆಳೆಗಾರರಿಗೆ ನೇರವಾಗಿ ಐದು ಸಾವಿರ ರೂಪಾಯಿಗಳನ್ನು ನಗದು ರೂಪದಲ್ಲಿ ನೀಡುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಸಾಲಿನಲ್ಲಿ ನಷ್ಟ ಅನುಭವಿಸುತ್ತಿರುವ ಆಲೂಗಡ್ಡೆ ಬೆಳೆಗಾರರಿಗೆ ಪ್ರತಿ ಎಕರೆಗೆ 5ಸಾವಿರಗಳನ್ನು ನಗದು ರೂಪದಲ್ಲಿ ನೀಡುವ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಆಲೂಗಡ್ಡೆಯನ್ನು ಹಾಸನ, ಚಿಕ್ಕಮಗಳೂರು, ಬೆಳಗಾವಿ,